ಬೇಡಿಕೆಯ ಸಂಖ್ಯೆ : 54 (ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 239,62,87,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 132,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 55 (ಗ್ರಾಮೀಣಾಭಿವೃದ್ಧಿ)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಗ್ರಾಮೀಣಾಭಿವೃದ್ಧಿ''ಗಾಗಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 634,05,73,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಅಧ್ಯಕ್ಷರು: ಈಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲಾಗುವ ವಿಚಾರಗಳನ್ನು ತೆಗೆದುಕೊಳ್ಳೋಣ.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅ) ವಿಷಯ: ಹಿರೇಕೆರೂರು ತಾಲ್ಲೂಕಿನಲ್ಲಿ ಕಾಡುಹಂದಿ ಕಡಿದ ಪ್ರಕರಣಗಳು.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ತಾಲ್ಲೂಕಿನಲ್ಲಿ ಚಿಕ್ಕಬೂದಿಹಾಳ್ ಗ್ರಾಮದಲ್ಲಿ ಮೂರು ಜನರಿಗೆ ಕಾಡುಹಂದಿ ಕಡಿದು ಜೋಗಿಹಳ್ಳಿ ಗ್ರಾಮದಲ್ಲಿ ಮಲ್ಲನಗೌಡ ಪಾಟೀಲರಿಗೆ ಕರಡಿ ಕಡಿದ ಪ್ರಕರಣ, ಕಡಪಲಿ ಗ್ರಾಮದ ಹನುಮಂತಪ್ಪನವರಿಗೆ ಹಾಗೂ ಇತರ 9 ಜನರಿಗೆ ಹುಚ್ಚುನರಿ ಕಡಿದ ಪ್ರಕರಣದಲ್ಲಿ... ಇದುವರೆಗೂ ಪರಿಹಾರ ವಿತರಣೆಯಾಗಿಲ್ಲ. ಕಳೆದ ಒಂದು

ವರ್ಷದಿಂದ ಈ ಮೂರು ಪ್ರಕರಣಗಳಲ್ಲಿ ಕಾಗದಗಳು ಕೆಳಗಿನ ಕಛೇರಿಯಿಂದ ಮೇಲಿನ ಕಛೇರಿಗೆ ಓಡಾಡುತ್ತಿದೆ. ಪರಿಹಾರಕ್ಕಾಗಿ ಈ 12 ಜನ ಓಡಾಡಿ ಬಹಳ ತೊಂದರೆಗೆ ಈಡಾಗಿದ್ದಾರೆ. ಕೂಡಲೆ ಈ ಬಗ್ಗೆ ಎಲ್ಲರಿಗೂ ಪರಿಹಾರವನ್ನು ಕೊಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಮಾನ್ಯ ಅರಣ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) (ಅರಣ್ಯ ಸಚಿವರ ಪರವಾಗಿ): ಪರಿಹಾರ ಕೊಡುವುದಕ್ಕೆ ಅರ್ಹವಾದ ಪ್ರಕರಣಗಳಾಗಿದ್ದರೆ ಖಂಡಿತವಾಗಿ ಒಂದು ವಾರ ಅಥವಾ ಹದಿನೈದು ದಿವಸಗಳಲ್ಲಿ ಆ ಪರಿಹಾರವನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಮಾಡಿಸುತ್ತೇನೆ.

ಅ) ವಿಷಯ: ಮುಂಬಯಿ ಕರ್ನಾಟಕ ಪ್ರದೇಶಗಳಲ್ಲಿ ಎ.ಪಿ.ಎಂ.ಸಿ.ಗಳ ಕಾರ್ಯ ಸ್ಥಗಿತಗೊಂಡಿರುವುದು.

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಅಧ್ಯಕ್ಷರೇ, ನಮ್ಮ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಎಲ್ಲಾ ಎಪಿಎಂಸಿಗಳು ಕಳೆದ ಒಂದನೇ ತಾರೀಖಿನಿಂದ ಇಲ್ಲಿಯವರೆವಿಗೂ ಕೆಲಸವನ್ನು ಮಾಡುತ್ತಿಲ್ಲ. ಹತ್ತಿ ಮತ್ತು ಆಯಿಲ್ ಸೀಡ್ಸ್‌ಗೆ ಪರ್ಚೆಸರ್ ಪಾಯಿಂಟ್‌ನಿಂದ ಸೆಲ್ಲರ್ ಪಾಯಿಂಟ್ ಟ್ಯಾಕ್ಸನ್ನು ವರ್ಗಾಯಿಸಿದ್ದರಿಂದ ಅಲ್ಲಿನ ದಳ್ಳಾಳಿಗಳು ಹತ್ತಿ ಮತ್ತು ಎಣ್ಣೆಕಾಳುಗಳ ವ್ಯಾಪಾರದಲ್ಲಿ ವ್ಯಾಪಾರಸ್ಥರಿಂದ ನಮಗೆ ಪೇಮೆಂಟ್ ಸಿಗುವುದಿಲ್ಲ. ಆದರೆ ನಾವು ನಮ್ಮ ಬಂಡವಾಳದಿಂದ ಸೇಲ್ಸ್‌ಟ್ಯಾಕ್ಸನ್ನು ತುಂಬಬೇಕಾಗುತ್ತದೆ. ಅದಕ್ಕೋಸ್ಕರ ಈ ವ್ಯವಹಾರವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ದಯವಿಟ್ಟು ಮೊದಲು ಪರ್ಚೇಸರ್ ಪಾಯಿಂಟ್ ಟ್ಯಾಕ್ಸ್ ಇತ್ತೋ ಅದನ್ನು ಪರ್ಚೇಸ್ ಪಾಯಿಂಟ್‌ಗೆ ಇಡಬೇಕು. ಸೆಲ್ಲರ್ ಪಾಯಿಂಟ್ ಅಂದರೆ ಕನ್ಸೂಮರ್ ಪಾಯಿಂಟ್‌ಗೆ ಇಡಬಾರದು. ನಾವು ಮಿಲ್‌ನವರು ಖರೀದಿ ಮಾಡಿದಾಗ ಟ್ಯಾಕ್ಸನ್ನು ಮೊದಲು ತುಂಬುವ ಪದ್ಧತಿ ಇತ್ತು. ಈಗ ದಳ್ಳಾಳಿಗಳ ಹತ್ತಿರ ಖರೀದಿಯಾದ ತಕ್ಷಣ ಟ್ಯಾಕ್ಸನ್ನು ತುಂಬಬೇಕಾಗುತ್ತದೆ. ದಳ್ಳಾಳಿಗಳಿಗೆ ವ್ಯಾಪಾರಸ್ಥರಿಂದ ದುಡ್ಡು ಬರುವುದಿಲ್ಲ, ಇದು ತಮಗೂ ಗೊತ್ತು. ದಳ್ಳಾಳಿಗಳಿಗೆ ಸರಿಯಾದ ಸಮಯಕ್ಕೆ ವ್ಯಾಪಾರಸ್ಥರಿಂದ ಹಣ ಬರದಿದ್ದರೂ ಸೇಲ್ಸ್ ಟ್ಯಾಕ್ಸನ್ನು ವ್ಯಾಪಾರಸ್ಥರ ಪರವಾಗಿ ಸರ್ಕಾರಕ್ಕೆ ಇವರೇ ಕಟ್ಟಬೇಕಾದ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿ ಇರುವುದರಿಂದ ನಮಗೆ ವ್ಯವಹಾರ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಎಲ್ಲಾ ಎಪಿಎಂಸಿಗಳು ಕಳೆದ 21 ದಿವಸಗಳಿಂದ ಸ್ಥಗಿತಗೊಂಡಿವೆ. ಹಾಗಾಗಿ ರೈತರಿಗೂ ಸಹಿತ ಏನೋ ಅಲ್ಪಸ್ವಲ್ಪ ಬಂದಂತಹ ಮಾಲನ್ನು ಮಾರಾಟ ಮಾಡಬೇಕೆಂದರೆ ಇವತ್ತು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಇಲ್ಲ. ಹೀಗಾಗಿ ಕೆಲವು ವ್ಯಾಪಾರಸ್ಥರಿಂದ ಗ್ರಾಮೀಣ ಪ್ರದೇಶಕ್ಕೆ ಹೋಗಿ ಮಾರುಕಟ್ಟೆಯಲ್ಲಿ ಅದು 500 ರೂಪಾಯಿಗೆ ಮಾರಾಟವಾಗುತ್ತಿದ್ದರೆ 300 ರೂ., 400 ರೂ.ಗೆ ಕೊಟ್ಟು ಅಡಚಣೆಗೆ ಒಳಗಾಗಿ ರೈತರಿಂದ ನೇರವಾಗಿ ಕಡಿಮೆ ಬೆಲೆಗೆ